ಅ) ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯುವುದರಿಂದ (ಗಣಿಗಾರಿಕೆ) ಪರಿಸರ ಅಸಮತೋಲನ ಆಗುತ್ತದೆಯೋ ಹೇಗೆಂಬ ಬಗ್ಗೆ ಸಮಿತಿ ರಚಿಸಿ (4-5 ದಿನಗಳಲ್ಲಿ) ಅಭಿಪ್ರಾಯ ಪಡೆಯಲಾಗುತ್ತದೆ ಎಂಬ ಭರವಸೆಯನ್ನು ಕಳೆದ ಅಧಿವೇಶನದಲ್ಲಿ ನೀಡಲಾಗಿತ್ತೆ?

ಆ) ಆ ಸಮಿತಿ ಯಾವಾಗ ರಚಿಸಲಾಯಿತು ಸಮಿತಿಯು ಎಂದು ವರದಿ ಒಪ್ಪಿಸಿತು, ವರದಿಯ ನಿರ್ಣಯಗಳೇನು?

ಇ) ಸಮಿತಿಯ ನಿರ್ಣಯದ ಮೇಲೆ ಸರಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ್. ನೀ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಸಮಿತಿಯನ್ನು ರಚಿಸುವಲ್ಲಿ ಆಡಳಿತಾತ್ಮಕ ತೊಂದರೆಗಳಿಂದಾಗಿ ಸಮಿತಿಯನ್ನು ರಚಿಸಲು ವಿಳಂಬವಾಗಿದೆ. ಸಮಿತಿಯನ್ನು ಇನ್ನು ರಚಿಸಲಾಗಲಿಲ್ಲ.

ಇ) ಮೇಲಿನ ಉತ್ತರಗಳಿಂದ ಈ ಪ್ರಶ್ನೆಗೆ ಉತ್ತರಿಸುವ ಪ್ರಸಂಗ ಇರುವುದಿಲ್ಲ. ಆದಾಗ್ಯೂ ಸಮಿತಿಯನ್ನು ಕೂಡಲೇ ರಚಿಸಿ ವರದಿಯನ್ನು ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ: ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ

2478 (3183)

ಡಾ: ಎಂ.ಪಿ.ಕರ್ಕಿ (ಕುಮಟ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡಲು ಸರ್ಕಾರದ ತೀರ್ಮಾನವಾಗಿದೆಯೇ?

ಆ) ಹಾಗಿದ್ದಲ್ಲಿ ಯಾವ ಮಾನದಂಡದ ಪ್ರಕಾರ ಅನುಮತಿ ನೀಡಲಾಗುವುದು?

ಇ) ಈ ಅನುಮತಿಗೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಒಪ್ಪಿಗೆ ನೀಡಿದೆಯೇ?

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಹೊಸ ವೈದ್ಯಕೀಯ ಮತ್ತು ದಂತ ಕಾಲೇಜುಗಳು ತೆರೆಯುವ ಬಗ್ಗೆ ಪರಿಣಿತರ

ಸಮಿತಿಯು ತನ್ನ ವರದಿಯನ್ನು ಸಚಿವ ಸಂಪುಟದ ಉಪಸಮಿತಿಗೆ ನೀಡಿದ್ದು, ಸದರಿ ವರದಿಯು ಸಚಿವ ಸಂಪುಟದ ಉಪಸಮಿತಿಯ ಪರಿಶೀಲನೆಯಲ್ಲಿದೆ.

ಅ) (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

ವಿಷಯ: ಕೊಡಗು ಜಿಲ್ಲೆಯ ಅರಣ್ಯ ಇಲಾಖೆಯ ಅಪರಾಧ ಪ್ರಕರಣಗಳು

2479 (3196)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1995-96, 1996-97ನೇ ಸಾಲಿನಲ್ಲಿ ದಾಖಲಾಗಿರುವ ಅರಣ್ಯ ಇಲಾಖೆಯ ಅಪರಾಧ ಪ್ರಕರಣಗಳೆಷ್ಟು?

ಆ) ಸರ್ಕಾರ ಅನೆರಿದೇಮ್ ಜಾಗದಲ್ಲಿ ಮರಗಳನ್ನು ಕಡಿಯುವುದನ್ನು ನಿಷೇಧಿಸಿದ ನಂತರ ಆ ಅವಧಿಯಲ್ಲಿ ಎಫ್.ಒ.ಸಿ. ಮಾರಿದ ಮರಗಳ ವಿವರಗಳನ್ನು ಒದಗಿಸುವುದು.

ಇ) ಇದುವರೆಗೆ ಎಫ್.ಒ.ಸಿ.ಯಲ್ಲಿ ಮಾರಿದ ಒಟ್ಟು ಮರಗಳ ಮೌಲ್ಯವೆಷ್ಟು? ಹಾಗೂ ಎಷ್ಟು ಘನ ಮೀಟರ್ ಮತ್ತು ಯಾವ ಯಾವ ಜಾತಿಗೆ ಸೇರಿದೆ ಮರಗಳು: (ವಿವರಣೆ ನೀಡುವುದು).

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣಗಳು:

1995-96 - 651 ಪ್ರಕರಣಗಳು

1996-97 - 726 ಪ್ರಕರಣಗಳು.

ಆ) 1993-94ನೇ ಸಾಲಿನಿಂದ ನಿಷೇದಾಜ್ಞೆ ಜಾರಿ ನಂತರ ಇದುವರೆಗೆ 31-7-97ರ ತನಕ ಎಫ್.ಒ.ಸಿ. ಮಾರಿದ ಮರಗಳ ವಿವರ ಕೆಳಕಂಡಂತೆ ಇರುತ್ತದೆ.

ಪ್ರಕರಣಗಳು	ನಾಟ	ಕಟ್ಟಿಗೆ	ಮೌಲ್ಯ (ರೂ.ಲಕ್ಷಗಳಲ್ಲಿ)
207 ಘ.ಮೀ.	11984 ಘ.ಮೀ.	15432	1,80,22,800-00